# ಕೈಕೇಯಿ ಶ್ರೀರಾಮನ ವನವಾಸವಾಗಲು ಏಕೆ ಬಯಸಿದಳು ?




ಸಂಗ್ರಹ / ವಿವರಣೆ

**ಪ್ರೊ|| ಪಂ|| ಬದರೀನಾಥಾಚಾರ್ಯ ಘೂಳಿ** ಎಂ.ಎ.



**ಮಾಧವ ಮಧ್ವ ಪ್ರಕಾಶನ**

ನಂ. 164, 7ನೇ ಅಡ್ಡ ರಸ್ತೆ, 7ನೇ ಮುಖ್ಯ ರಸ್ತೆ,

ಬಿ.ಇ.ಎಂ.ಎಲ್. ಬಡಾವಣೆ, 3ನೇ ಹಂತ,

ರಾಜರಾಜೇಶ್ವರಿನಗರ, ಬೆಂಗಳೂರು – 560 098

**2008**

ಅಕ್ಷರ ಜೋಡಣೆ ಮತ್ತು ವಿನ್ಯಾಸ

**ಪಿ.ಎಸ್. ರಾಘವೇಂದ್ರ**

**ಬನಶಂಕರಿ ೧ನೇ ಹಂತ (ಹನುಮಂತನಗರ),**

**ಬೆಂಗಳೂರು – ೫೬೦ ೦೫೦**

**ದೂ : ೦೮೦–೨೨೪೨೧೭೯೪**



# ಕೈಕೇಯಿ ಶ್ರೀರಾಮನ ವನವಾಸವಾಗಲು ಏಕೆ ಬಯಸಿದಳು ?

*ಪ್ರೊ॥ ಬದರೀನಾಥಾಚಾರ್ಯ ಘೂಳಿ*

ಕೇಕೇಯ ದೇಶದ ಅಶ್ವಪತಿ ರಾಜನ ಮಗಳು ಕೈಕೇಯಿ. ಅತ್ಯಂತ ಸುಂದರಿ, ತುಂಬು ಯೌವ್ವನ, ಅಂದವಾದ ಮೈಕಟ್ಟು, ಚಾಣಕ್ಷಿ. ದಶರಥ ಮಹಾರಾಜ ಇವಳ ಸೌಂದರ್ಯದ ಬಗ್ಗೆ ಕೇಳಿ ಅವಳನ್ನು ಮದುವೆಯಾಗಬೇಕೆಂದು ಅಶ್ವಪತಿಯಲ್ಲಿ ತಿಳಿಸುತ್ತಾನೆ. ಅಶ್ವಪತಿ ಮೊದಲು ಒಪ್ಪಲಿಲ್ಲ. ನಂತರ ವಿಚಾರ ಮಾಡಿ ತನ್ನ ಮಗಳು ಸುಪ್ರಸಿದ್ಧ ಚಕ್ರವರ್ತಿಯ ಮಡದಿ ಆಗುವಳೆಂಬುದನ್ನು ಮನಗಂಡ. ಆದರೆ ಸಮ್ಮತಿಸನಾದರೂ ಒಂದು ನಿಯಮ ಹಾಕಿದ. "ರಾಜನ್ ನಿನಗೆ ಈಗಾಗಲೇ ಇಬ್ಬರು ಪತ್ನಿಯರಿದ್ದಾರೆ. ಈಗ ಕೈಕೇಯಿಯನ್ನು ಲಗ್ನವಾದರೆ ಮೂರನೆಯವಳಾಗಿ ಕಿರಿಯ ಸತಿಯಾಗುವಳು. ಚಿಂತೆಯಿಲ್ಲ. ಆದರೆ ಒಂದು ಸಂಶಯ. ನಿನ್ನ ಎರಡು ಪತ್ನಿಯರಲ್ಲಿ ಮಕ್ಕಳಾಗಬಹುದು. ತತ್ರಾಪಿ ಕೌಸಲ್ಯಾಗೆ ಪುತ್ರನಾದರೆ ಅಯೋಧ್ಯಾ ರಾಜ್ಯಕ್ಕೆ ಅವಳ ಮಗನೇ ರಾಜನಾಗುತ್ತಾನೆ. ಕೌಸಲ್ಯಾ ಪಟ್ಟದ ರಾಣಿಯಾಗುತ್ತಾಳೆ. ಆಗ ನನ್ನ ಮಗಳು ದಾಸಿಯಂತೆ ಆಗಿ, ಅವಳಿಗೇನಾದರೂ ಪುತ್ರನಾದರೆ ಅವನೂ ಸಹ ದಾಸೀ ಪುತ್ರನಂತೆ ಆಗುವನು. ಇದಕ್ಕೆ ನಾನು ಸಮ್ಮತಿಸುವುದಿಲ್ಲ. ನೀನು ಒಂದು ವಚನ ಕೊಡಬೇಕು. ಹಾಗಿದ್ದರೆ ಮಾತ್ರ ಈ ಸಂಬಂಧಕ್ಕೆ ನನ್ನ ಒಪ್ಪಿಗೆ ಇದೆ" ಎಂದು ಹೇಳಿ ತನ್ನ ನಿಯಮವನ್ನು ತಿಳಿಸುತ್ತಾನೆ. ಮುಂದೆ ಕೈಕೇಯಿಗೆ ಪುತ್ರನಾದರೆ ಅವನೇ ಅಯೋಧ್ಯಾಗೆ ರಾಜನಾಗಬೇಕು ಎಂದು. ದಶರಥ ಮಹಾರಾಜ ಮೊದಲು ಬಹಳ ಯೋಚಿಸಿದ. ಕೌಸಲ್ಯಾಳಿಗೆ ಈಗಾಗಲೇ ಸಾಕಷ್ಟು ವಯಸ್ಸು ಆಗಿದೆ. ಮಗನಾಗುವ ಸಂಭವವಿರಲಾರದು. ಇನ್ನು ಸುಮಿತ್ರಾಳಿಗೂ ಅಷ್ಟೆ. ಮಕ್ಕಳಾಗುತ್ತಾರೆಂಬ ಭರವಸೆ ಇಲ್ಲ. ಕೈಕೇಯಿಯಾದರೋ ಯುವತಿ. ಮಕ್ಕಳಾಗುವ ಸಾಧ್ಯತೆ ಇದೆ. ಆದರೂ ಒಂದು ವೇಳೆ ಕೌಸಲ್ಯಾ ಪುತ್ರವತಿಯಾದರೆ ಏನು ಮಾಡುಬೇಕು ? ಎಂದು ಆಗ ನೋಡೋಣ. ಈಗೇಕೆ ತಲೆ ಬಿಸಿಮಾಡಿಕೊಳ್ಳಬೇಕು ಎಂದು ವಿಚಾರ ಮಾಡಿ ಅಶ್ವಪತಿಗೆ ವಚನ ಕೊಡುತ್ತಾನೆ.

ಕೈಕೇಯ ದೇಶವು ಗಾಂಧಾರ ರಾಜ್ಯ ಪಶ್ಚಿಮಕ್ಕಿದ್ದಿತು. ಸುಮಾರು ಕ್ರಿ.ಪೂ. ೩೦೦೦ದಲ್ಲಿ ಅತಿ ಪುರಾತನ ಸುಪ್ರಸಿದ್ಧ ರಾಜ್ಯಗಳಾಗಿ ಅಲ್ಲಿ ಕೆಲ ವಿಶ್ವವಿದ್ಯಾಲಯಗಳು ಇದ್ದವು. **ಓದಂತಪುರಿ, ಗಾಂಧಾರ, ತಕ್ಷಶಿಲ**ವೆಂಬ ಜಗದ್ವಿಖ್ಯಾತವಾಗಿ ನಾನಾ

ದೇಶಗಳಿಂದ ಸಾಕಷ್ಟು ವಿದ್ಯಾರ್ಥಿಗಳು ಬರುತ್ತಿದ್ದರು. Odantapuri, Gandhara, Takshashila were among many ancient Universities existed. ಗಾಂಧಾರ ಶಿಲ್ಪಕಲಾ ಪ್ರಾವಿಣ್ಯತೆ ಪಡೆದ Gandhara style ಅಂತಲೇ ಕರೆಯಲಾಗಿತ್ತು.

ಗಾಂಧಾರ ಈಗಿನ ಅಫ್ಘಾನೀಸ್ಥಾನ (Afghanistan)ದ ಪೂರ್ವಕ್ಕೆ ಸಿಂಧೂ ನದಿಗೆ ಸಮೀಪ ಕಾಬೂಲ್ (ಕಪಿಲ) ಎಂಬ ನದಿತೀರದಲ್ಲಿ ಸಿಂಧೂ–ಕೋನಾರ ನದಿಗಳ ಮಧ್ಯೆ ಪುರುಷಪುರ(Peshavar) ರಾಜಧಾನಿಯಾಗಿತ್ತು.

ರಾಯಾಯಣ ಉತ್ತರಕಾಂಡದ ೧೧೧ನೇ ಅಧ್ಯಾಯ ೧೦–೧೧ ಶ್ಲೋಕಗಳಲ್ಲಿ ಇದರ ಬಗ್ಗೆ ತಿಳಿಸುತ್ತದೆ.

**“ಭರತಃ ಕೈಕೇಯೀಸುತಃ (ಸುಬಲಾಖ್ಯ ನರಾಧಿಪಸ್ಯಸುತಃ ಭರತಃ ಇತಿ ವಿಖ್ಯಾತಃ) ನಿವೇಶಯಾಮಾಸ ತದಾಸಮೃದ್ಧೋ ದ್ವೇಪುರೊತ್ತಮೆ । ತಕ್ಷಂ ತಕ್ಷಸಿಲಾಯಾಂ ತು ಪುಷ್ಕಲಂಚ ಪುಷ್ಕಲಾವತೀ ॥ ಗಂಧರ್ವದೇಶೇ ರುಚಿರೇ ಗಾಂಧಾರ ವಿಷಯೇಚಸಃ ॥**

ಮಹಾಭಾರತ ಭೀಷ್ಮಪರ್ವ ೯ನೇ ಅಧ್ಯಾಯ ಶ್ಲೋಕ ೧೩–೧೫ರಲ್ಲಿ ಸಂಜಯನು ಧೃತರಾಷ್ಟ್ರನಿಗೆ ಭಾರತ ದೇಶದ ನಕಾಶೆಯನ್ನು ತಿಳಿಸುತ್ತಾ

**“ಇರಾವತೀ ವಿತಸ್ತಾಂಚ ಪಯೋಷ್ಣಿಂ ದೇವಿ ಕಾಮಪಿ ।**
**ಕಾಶ್ಮೀರಾ ಸಿಂಧು ಸಾವ್ವೀರಾ ಗಾಂಧಾರಾದರ್ಶಕಸ್ತಥಾ ॥**

ಧೃತರಾಷ್ಟ್ರನ ಹೆಂಡತಿ ಗಾಂಧಾರಿಯು ಸುಬಲನ ಮಗಳು. ಈತನಿಗೆ ಹತ್ತು ಮಂದಿ ಹೆಣ್ಣುಮಕ್ಕಳು ಹದಿಮೂರು ಮಂದಿ ಗಂಡುಮಕ್ಕಳು. ಅವರಲ್ಲಿ ಶಕುನಿ ಗಾಂಧಾರಿಯ ತಮ್ಮನಾಗಿದ್ದ.

ತಕ್ಷಶಿಲಾ ಪ್ರಾಚೀನ ವಿದ್ಯಾಲಯವಾಗಿತ್ತು. ಕೇಕೇಯ ರಾಜನ ಪುತ್ರ ಭರತನೆಂಬುವನು ಈ ನಗರವನ್ನು ಸ್ಥಾಪಿಸಿದ. ಇದು ಸಿಂಧೂ–ವಿತಸ್ತಾ (ಝೀಲಮ್) ನದಿಗೆ ದಕ್ಷಿಣ ಪೂರ್ವದಲ್ಲಿ ಅಭಿಸಾರಿ ಎಂದು ಆಗ್ಗೆ ಹೆಸರಿದ್ದಿತು. ಶ್ರೀಮದ್ಭಾಗವತದ ಪಂಚಮ ಸ್ಕಂಧ ೧೧ನೇ ಅಧ್ಯಾಯ ಜಡಭರತರ ರಹೋಗುಣ ಮಹಾರಾಜ ಸಂವಾದದಲ್ಲಿ ರಹೋಗುಣರಾಜ ಸಿಂಧು ಸಾವೀರ ದೇಶದ ಅರಸು ಎಂದು ತಿಳಿಸುತ್ತದೆ.

ಆ ರಾಜರು ಪರಸ್ಪರ ಹೊಡೆದಾಡುತ್ತಾ ರಣಾಕಾಂಕ್ಷಿಗಳಾಗಿ ಒಂದು ರೀತಿ ಅಸಂಸ್ಕೃತರಾದ ವೈರಿಗಳು ಇಂತಹ ದೇಶದ ಪ್ರಭಾವ ಕೈಕೇಯಿಗೂ ಹುಟ್ಟುಗುಣವಾಗಿದ್ದಿತು.

ಅಲ್ಲಿರುವ ದೇಶಗಳು ಅಸಂಸ್ಕೃತ (Belligerent unorganised states



Gandhara products were Gandhari and her brother Shakuni of Mahabharatha) ಇಂತಹ ಕೈಕೇಯಿ ಶ್ರೀರಾಮನ ರಾಜ್ಯ ಪಟ್ಟಾಭಿಷೇಕವನ್ನು ತಡೆದುದು ಒಂದಂಶ.

ಕೈಕೇಯ ದೇಶದ ಎಲ್ಲರೂ ಕುದುರೆ ರಥಗಳನ್ನು ಓಡಿಸುವ ಜಾಣರು. ಅಂತೆಯೇ ಕೈಕೇಯಿಯೂ ಕಲಿತಿದ್ದಳು. ಹೀಗಾಗಿ ಕೈಕೇಯಿಯೊಂದಿಗೆ ಲಗ್ನ ಮಾಡಿಕೊಂಡ ದಶರಥ ರಾಜ ಕೈಕೇಯಿ ಸೌಂದರ್ಯ ದಾಸನಾದ. ಇದನ್ನು ಗಮನಿಸಿದ ಕೈಕೇಯಿ ರಾಜನನ್ನು ಕೈಗೊಂಬೆಯಂತೆ ಆಡಿಸುತ್ತಿದ್ದಳು. ಮೇಲೆ ಹಠಮಾರಿ, ಛಲವಿದ್ದಿತು.

ವಿಧಿವಿಲಾಸವೇ ಬೇರೆ ಇದ್ದಿತು. ಕೌಸಲ್ಯಾ ಶ್ರೀರಾಮನನ್ನು ಮೊದಲು ಪಡೆದಳು. ಸುಮಿತ್ರಾ ಲಕ್ಷ್ಮಣನನ್ನು ಕೈಕೇಯಿ ಭರತನನ್ನು ಸುಮಿತ್ರಾ ಪುನಃ ಶತೃಘ್ನನನ್ನು ಕ್ರಮವಾಗಿ ಪಡೆದರು. ಶ್ರೀರಾಮನ ಅವತಾರ ಸರ್ವರೀತಿಯಿಂದಲೂ ಆದರಣೀಯನಾದ. ನಾಡಿನ ನೆಚ್ಚಿನ ಯುವರಾಜ. ಸೌಮ್ಯ, ಮಂದಹಾಸ, ಅಜಾನುಬಾಹು, ಆಕರ್ಷಕ ದೇಹಕಾಂತಿ ಮನುಜರು ಮೆಚ್ಚುವ ತರುಣ. ಕೈಕೇಯಿ ಮೊದಮೊದಲು ರಾಮಚಂದ್ರನನ್ನು ಅತಿಯಾಗಿ ಪ್ರೀತಿಸುತ್ತಿದ್ದಳು. ತನ್ನ ಮಗ ಭರತನಿಗಿಂತ ಒಂದು ಪಾಲು ಹೆಚ್ಚು ರಾಮನೆಂದರೆ ಅಭಿಮಾನವಿತ್ತು. ದಶರಥ ರಾಜನಿಗೆ ರಾಮನೆಂದರೆ ಹೆಚ್ಚು ಪ್ರೀತಿ ಇದ್ದಿತು. ಆದರೂ ದಶರಥನಿಗೆ ಒಳಗೆ ಅಳಕು ಇದ್ದಿತು. ಹಿಂದೆ ಅಶ್ವಪತಿ ರಾಜನಿಗೆ ಕೊಟ್ಟ ವಚನ ಮೇಲೆ ಮೇಲೆ ಕಾಡುತ್ತಿತ್ತು. ಭರತ ಶತೃಘ್ನರು ಊರಲಿಲ್ಲದ ಸಮಯ ನೋಡಿ ರಾಮನಿಗೆ ರಾಜ್ಯ ಪಟ್ಟಾಭಿಷೇಕ ಮಾಡಲು ಸಿದ್ಧತೆ ನಡೆಸುತ್ತಾನೆ. ಮಂತ್ರಿಗಳು, ಸಾಮಂತರು, ಪ್ರಜೆಗಳು, ವಿಷಯ ತಿಳಿದು ಸಂತೋಷ ಪಡುತ್ತಾ ಸ್ವಾಗತಿಸುತ್ತಾರೆ. ಕೈಕೇಯಿಗೂ ಗೊತ್ತಾಗುತ್ತದೆ. ಆನಂದ ಪಡುತ್ತಾಳೆ. ಈ ಸಂತೋಷವು ಅಲ್ಪ ಕಾಲ ಮಾತ್ರ ಇದ್ದಿತು. ಆದರೆ ಮಂಥರೆಯ ದುರ್ಬೋಧೆಯಿಂದ ಶ್ರೀರಾಮನನ್ನು ಪ್ರೀತಿಸುತ್ತಿದ್ದವಳು ಏಕಾಏಕಿ ಶ್ರೀರಾಮನೆಂದರೆ ಅಸಹ್ಯ, ದ್ವೇಷವಾಗಿ ಪರಿಣಮಿಸುತ್ತದೆ.

ಹೀಗೇಕೆ ಆಯಿತು. ಪ್ರೀತಿ ದ್ವೇಷವಾಗಲು ಕೈಕೇಯಿ ನಿಜ ಸ್ವರೂಪ ಎಂಥದ್ದು ಎಂಬುದರ ಬಗ್ಗೆ ತಿಳಿಯಬೇಕು. ಅವಳ **ಪೂರ್ವಜನ್ಮ ವೃತ್ತಾಂತ** ಎಂತಹದ್ದು ಎನ್ನುವುದನ್ನು ವಿಚಾರ ಮಾಡೋಣ.

**ಸ್ಕಾಂದಪುರಾಣ ವೈಷ್ಣವ ಖಂಡ**ದಲ್ಲಿ ಹಾಗೂ **ಕಾರ್ತೀಕ ಮಾಸ ಮಾಹಾತ್ಮೆ**ಯಲ್ಲಿ ಸ್ವಲ್ಪ ವಿವರಣೆ ಇದೆ.

ಕೈಕೇಯಿ ಪೂರ್ವಜನ್ಮದಲ್ಲಿ **ಭಿಕ್ಕು** ಎಂಬ ಬ್ರಾಹ್ಮಣನ ಮಡದಿಯಾಗಿ ಸೌರಾಷ್ಟ್ರ ದೇಶದಲ್ಲಿದ್ದಳು. ಅವಳ ಹೆಸರು **ಕಲಹ** ಎಂದಿದ್ದಿತು. ಹೆಸರಿಗೆ ತಕ್ಕಂತೆ ಜಗಳಗಂಟಿ ದಯಾರಹಿತಳು, ನಿರ್ದಾಕ್ಷಿಣ್ಯ ಸ್ವಭಾವ, ಗಂಡನನ್ನು ಲೆಕ್ಕಿಸುತ್ತಿರಲಿಲ್ಲ. ಅಡುಗೆ ತನಗೆ ಬೇಕಾದ್ದನ್ನು ಮಾಡಿ ಎಲ್ಲವನ್ನೂ ತಾನೇ ಉಣ್ಣುತ್ತಿದ್ದಳು. ಕ್ರೂರಿ. ಭಿಕ್ಕುವಿಗೆ

ಬೇಸರವಾಯಿತು. ಕೊನೆಗೆ ಇವಳ ವರ್ತನೆಯಿಂದ ಬೇಸತ್ತು ಮರು ಮದುವೆಯಾಗಲು ಯೋಚಿಸಿದ. ಈ ವಿಷಯ ಕಲಹಾಳಿಗೆ ತಿಳಿಯಿತು. ಭಿಕ್ಕುವಿನೊಂದಿಗೆ ಜಗಳವಾಡಿ ಸವತಿ ಬರುತ್ತಾಳೆಂಬ ಮಾತ್ಸರ್ಯದಿಂದ ವಿಷಪಾನ ಮಾಡಿ ಮೃತಳಾದಳು. ಅಕಾಲ ಮೃತ್ಯುವಿಗೆ ತುತ್ತಾಗಿ ಪಿಶಾಚಿ ಜನ್ಮ ಪಡೆದಳು. ಪಿಶಾಚಿಯಾಗಿ ಊರಿನ ಜನರನ್ನು ಕಾಡತೊಡಗಿದಳು. ಒಬ್ಬ ವರ್ತಕನ ದೇಹವನ್ನು ಹೊಕ್ಕು ಪೀಡಿಸುತ್ತಿದ್ದಳು. ಆ ವರ್ತಕ ಒಮ್ಮೆ ಕೃಷ್ಣಾ ನದಿಯಲ್ಲಿ ಸ್ನಾನ ಮಾಡಲು ಹೊರಟಾಗ ಅವನ ದೇಹವನ್ನು ಬಿಟ್ಟಳು. ಹೀಗೆ ಕಂಡ ಕಂಡವರನ್ನು ಪೀಡಿಸುವುದು ನಡೆದಿತ್ತು. ಒಮ್ಮೆ ಆ ಊರಿನ **ಧರ್ಮದತ್ತ**ನೆಂಬ ಬ್ರಾಹ್ಮಣ ಶ್ರೀವಿಷ್ಣು ಆಲಯ ಅರ್ಚಕ. ಪೂಜೆ ಮಾಡಿದ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವಾಗ ಕಲಹಾ ಪಿಶಾಚಿ ಎದುರಾದಳು. ಬ್ರಾಹ್ಮಣ ಅವಳನ್ನು ನೋಡುತ್ತಲೇ ಹೆದರಿ ಓಡಲು ಹೊರಟ. ಆಗ್ಗೆ ತನ್ನ ಕೈಯಲ್ಲಿದ್ದ ಪೂಜಾ ಪದಾರ್ಥಗಳು ಬಿದ್ದಿತು. ಕೆಲ ಪದಾರ್ಥಗಳು ಕಲಹಾ ಮೇಲೆಯೂ ಬಿದ್ದಿತು. ತತ್ಪರಿಣಾಮವಾಗಿ ಕಲಹಾ ಪಿಶಾಚಿ ಜನ್ಮ ನೀಗಿತು. ಹಿಂದಿನಂತೆ ಬ್ರಾಹ್ಮಣ ಸ್ತ್ರೀಯಾದಳು. ಧರ್ಮದತ್ತನ ಕಾಲಿಗೆ ಬಿದ್ದು ತಾನು ಹಿಂದೆ ಮಾಡಿದ ಪಾಪಕೃತ್ಯಗಳನ್ನು ಹೇಳಿಕೊಂಡು ಪರಿತಪಿಸಿದಳು. ತನಗೆ ಮುಂದೆ ನೀಚ ಯೋನಿಗಳು ಬರುವುದೇನೋ ಎಂದು ಹೆದರಿದಳು. ಬ್ರಾಹ್ಮಣನನ್ನು ಕಾಪಾಡುವಂತೆ ಯಾಚಿಸಿದಳು. ಬ್ರಹ್ಮದತ್ತನಿಗೆ ಅವಳ ಕಥೆ ಕೇಳಿ ಕನಿಕರವಾಯಿತು. ತಾನು ಈವರೆಗೂ ಕಾವೇರಿ ಸ್ನಾನ ಮಾಡಿ ಸಂಪಾದಿಸಿದ ಪುಣ್ಯದ ಅರ್ಧ ಭಾಗ ಅವಳಿಗೆ ಧಾರೆ ಎರೆದ. ಇದರ ನಿಮಿತ್ತ ಕಲಹಾ ತನ್ನ ದೇಹ ತ್ಯಜಿಸಿ ದಿವ್ಯ ವಿಮಾನದಲ್ಲಿ ಸ್ವರ್ಗಲೋಕಕ್ಕೆ ಹೋದಳು. ಪುಣ್ಯಲೋಕದಲ್ಲಿ ಸುಖವನ್ನನುಭವಿಸಿ ಭೂಲೋಕದಲ್ಲಿ ಅಯೋಧ್ಯಾ ರಾಜ್ಯಾಧಿಪತಿಯಾದ ದಶರಥ ಮಹಾರಾಜನ ಮೂರನೇ ಸತಿ ಕೈಕೇಯಿಯಾಗಿ ಭರತನ ಜನನಿಯಾದಳು.

## ಶ್ರೀರಾಮನ ಪಟ್ಟಾಭಿಷೇಕ

ಕೈಕೇಯಿಗೆ ಶ್ರೀರಾಮನ ರಾಜ್ಯ ಪಟ್ಟಾಭಿಷೇಕವೆನ್ನುವ ಸುದ್ದಿ ತಿಳಿಯಿತು. ಸ್ವಲ್ಪ ಸಮಯದಲ್ಲೇ ದಾಸಿಯಾದ ಮಂಥರೆ ಓಡಿ ಬಂದು ಗೋಳಾಡುತ್ತಾ ವಿಷಯ ತಿಳಿಸಿದಳು. ಕೈಕೇಯಿಗೆ ಮೊದಮೊದಲು ಆನಂದವಾಗುತ್ತೆ. ದಾಸಿಯನ್ನು ಪುರಸ್ಕರಿಸುತ್ತಾಳೆ. ಸಂತೋಷ ಕ್ಷಣಕಾಲ ಮಾತ್ರ. ಶ್ರೀರಾಮನೆಂದರೆ ಕೈಕೇಯಿಗೆ ತನ್ನ ಮಗನಿಗಿಂತ ಹೆಚ್ಚು ಪ್ರೀತಿ ಇದ್ದಿತು.

ಹೀಗಿರುವಾಗ ಪ್ರೀತಿ ಮಾಯವಾಗಿ ರಾಮನನ್ನು ದ್ವೇಷಿಸಲು ಆರಂಭಿಸಿದಳು. ಮಂಥರೆಯು ರಾಮನ ಬಗ್ಗೆ ಇಲ್ಲಸಲ್ಲದ ದುರ್ಬೋಧನೆಯ ಪರಿಣಾಮ ಹೀಗೇಕಾಯಿತು? ಶ್ರೀಮದಾಚಾರ್ಯರು **ಮ.ಭಾ.ತಾ.ನಿ. ಅ. ೯–೯೫**ರಲ್ಲಿ ಈ ರೀತಿ ತಿಳಿಸುತ್ತಾರೆ. **ಕೈಕೇಯಿಯಲ್ಲಿ ನಿಕೃತೀ ಎಂಬ ರಾಕ್ಷಸಿ ಆವೇಶವಿದ್ದಿತು. ಅಲಕ್ಷೀ** ನಾಮಕ ಮಂಥರೆಯ ದುರ್ಬೋಧನೆಯೇ ಕಾರಣವಾಯಿತು. **(ನಿಕೃತಿರ್ನಾಮ ಸಾ**



**ಕ್ಷಿಪ್ತಾ ಮಯಾ ತಮಸಿ ಶಾಶ್ವತೇ)** ನಿಕೃತಾಖ್ಯ ದೈತ್ಯಳು ಕೈಕೇಯೀ ಹೃದಯದೊಳಗೆ ಪ್ರವೇಶ ಮಾಡಿದ ಕಾರಣದಿಂದ ಶ್ರೀರಾಮನ ಸಾಮ್ರಾಜ್ಯಾಭಿಷೇಕಕ್ಕೆ ವಿಘ್ನ ತಂದು ಅರಣ್ಯಕ್ಕೆ ತೆರಳುವಂತೆ ಮಾಡಿದಳು.

ಹಿಂದಿನ ಜನ್ಮದ ಕಲಹಾ ಕೈಕೇಯಿ ಅಂತರಂಗದಲ್ಲಿ ಅಡಗಿದ್ದಳು. ಈಗ ಅವಳನ್ನು ಎಬ್ಬಿಸಿದವಳೇ ನಿಕೃತೀ ಎಂಬ ರಾಕ್ಷಸಿ. ಕಲಹಾ–ನಿಕೃತೀ ಎರಡು ಆವಿಷ್ಟವಾಗಿದ್ದರು. ಈಗ ಮಂಥರೆ ಎಂಬ ದಾಸಿಯ ದುರ್ಬೋಧನೆಯೂ ಸೇರಿ ಸಹಕರಿಸಿತು.

ಮಂಥರಾ ಶ್ರೀರಾಮನ ವಿರುದ್ಧ ಭರತನಿಗೆ ರಾಜ್ಯಾಭಿಷೇಕ ಬೇಕೆಂದು ಕೈಕೇಯಿಗೆ ಬೋಧಿಸಿ ಇದನ್ನು ಸಾಧಿಸಲು ದಶರಥ ಮಹಾರಾಜನನ್ನು ಕೇಳಲು ಹೇಳಿಕೊಟ್ಟಳು. ಶ್ರೀರಾಮ ಅರಣ್ಯಕ್ಕೆ ಹೋಗಬೇಕು, ಭರತನಿಗೇ ರಾಜ್ಯಾಭಿಷೇಕ ಎಂಬೆರಡು ವಿವರಗಳನ್ನು ಕೇಳುವಂತೆ ಹೇಳಿ, ಹಿಂದೆ ದಶರಥ ತನಗೆ ಎರಡು ವರ ನೀಡಿದ್ದನ್ನು ನೆನಪಿಗೆ ತಂದು ಅದನ್ನು ಈಗ ಕೇಳುವಂತೆ ಮಂಥರೆ ಕೈಕೇಯಿಗೆ ಉಪದೇಶ ಮಾಡಿದ ಕಾರಣ ಶ್ರೀರಾಮಚಂದ್ರ, ಸತೀ ಮತ್ತು ತಮ್ಮನ ಸಹಿತ ಅರಣ್ಯಕ್ಕೆ ಹೋಗುವಂತಾಯಿತು.

ಇಷ್ಟಾದರೂ ಕೈಕೇಯಿ ತನ್ನ ದುಷ್ಟ ಕಾರ್ಯದಿಂದಾಗಿ ನರಕವೇ ಆಗಬೇಕಿತ್ತು. ಆದರೆ ಶ್ರೀಮನ್ನಾರಾಯಣನು ಕೈಕೇಯಿಗೆ ಸದ್ಗತಿ ಪ್ರದಾನ ಮಾಡಲು ಹೇಳಿದನು.

**ಕೈಕಯೀ ತು ಚಲಾನ್ ಲೋಕಾನ್ ಪ್ರಾಪ್ತಾ ನೈವಾಚಲಾನ್ ಕ್ವಚಿತ್ ।**
**ಪಶ್ಚಾದ್ ಭಕ್ತಿಮತೀ ಯಸ್ಮಾತ್ ತ್ವಯಿ ಸಾ ಯುಕ್ತಮೇವ ತತ್**
**(ಮ.ತಾ.ನಿ. ಅ.–೯ –೯೬)**

ಪ್ರಸ್ತುತ ಕೈಕೇಯಿ ಸಾತ್ವಿಕ ಸ್ವಭಾವದವಳು. ಆದರೂ ಅವಳಲ್ಲಿ ನಿಕೃತೀ ಎಂಬ ರಾಕ್ಷಸಿ ಸೇರಿದ್ದಳು. ಇದರ ಪರಿಣಾಮ ಹಿಂದಿನ ಜನ್ಮ ಕಲಹ ಮರುಕಳಿಸಿತು. ಇದೂ ಸಾಲದೆ ಮಂಥರೆಯ ದುರ್ಬೋಧನೆ ಸೇರಿ ಶ್ರೀರಾಮನ ವನವಾಸಕ್ಕೆ ಕಾರಣಳಾದಳು.

ಆದರೆ **ಮಂಥರೆ ಯಾರು ?** ಇವಳು ಎಂತಹವಳೆಂಬುದನ್ನು ಪೂರ್ವೇತಿಹಾಸ ತಿಳಿದವರು ಶ್ರೀಮದಾಚಾರ್ಯರೇ. ಮಹಾಭಾರತ ತಾತ್ಪರ್ಯ ನಿರ್ಣಯ ಐದನೆಯ ಅಧ್ಯಾಯ ೧–೨ನೇ ಶ್ಲೋಕಗಳಲ್ಲಿ ತಿಳಿಸಲಾಗಿದೆ. ಮಂಥರ ಹಿಂದಿನ ಜನ್ಮದಲ್ಲಿ ದಾರಿದ್ರ್ಯಕ್ಕೆ ಅಭಿಮಾನಿದೇವತೆ, **ಅಲಕ್ಷ್ಮೀ** ಸ್ವರೂಪಳು **ಜ್ಯೇಷ್ಠ** ಎಂದು ಕರೆಯುವಂತಾಯಿತು. ಇವಳು **ಕಲಿ**ಯನ್ನು ಲಗ್ನವಾದಳು. **(ಕಲಿಭಾರ್ಯ)**

**ರಾಜಾ ರಾಜ್ಯಾಭಿಷೇಕೇ ಪ್ರಕೃತಿಜನವಚೋ ಮಾನಯನ್ನಾತ್ಮನೋಽರ್ಥ್ಯಂ**
**ದಧ್ರೇ ತನ್ಮಂಥರಾಯಾಃ ಶ್ರುತಿಪಥಮಗಮದ್ ಭೂಮಿಗಾಯಾ ಅಲಕ್ಷ್ಮ್ಯಾಃ**
**ಮ.ತಾ.ನಿ. ೫–೧**

**ವಿವರಣೆ :** ದಶರಥ ಮಹಾರಾಜನು ಶ್ರೀರಾಮನಲ್ಲಿ ವಿಶೇಷ ಅಭಿಮಾನದಿಂದಾಗಿ

ಅವನೇ ಈ ರಾಜ್ಯಕ್ಕೆ ಮುಂದೆ ರಾಜನಾಗಬೇಕು ಎಂದು ಸಂಕಲ್ಪಿಸಿ ಶ್ರೀರಾಮನಿಗೆ ಯುವರಾಜನಾಗಲು ಪಟ್ಟಾಭಿಷೇಕ ಮಾಡುವ ತತ್ಸಂಕಲ್ಪವನ್ನು ಮಂತ್ರಿ ಗುರುಗಳೊಂದಿಗೆ ವಿಷಯ ತಿಳಿಸಿದಾಗ ಅವರೆಲ್ಲರು ಸಮ್ಮತಿಸಿದರು.

ಈ ನಿರ್ಧಾರವು ಮಂಥರೆಗೆ ತಿಳಿಯಲಾಗಿ ತನ್ನ ರಾಣಿಯಾದ ಕೈಕೇಯಿಗೆ ತಿಳಿಸಿ ದುರ್ಬೋಧನೆ ಮಾಡಿದಳು.

**ಮಂಥರೆ ಯಾರು ?**

ಮಂಥರೆ ಹಿಂದಿನ ಜನ್ಮದಲ್ಲಿ ಅಸುರಾಧಿಪತಿಯಾದ ಕಲಿಗೆ ಹೆಂಡತಿಯಾದವಳು. ಈಗ ಕೈಕೇಯಿಗೆ ದಾಸಿತ್ವವು ಹೇಗೆ ಪ್ರಾಪ್ತವಾಯಿತು ? ಈಗ ಭೂಮಿಯಲ್ಲಿ ಏಕೆ ಬಂದಳು ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿರುವುದನ್ನು ಗಮನಿಸೋಣ.

ಪೂರ್ವದಲ್ಲಿ ದೇವತೆಗಳು, ದಾನವರು ಅಮೃತಕ್ಕಾಗಿ ಕ್ಷೀರಸಮುದ್ರ ಮಥನ ಮಾಡಿದರು. **(ಭಾರತ ಆದಿ ೧೮, ಭಾಗವತ ೮.೬, ವಿಷ್ಣುಪುರಾಣ ೧–೯, ಪದ್ಮ ೩.೯.೬)** ಆಗ ಮಂಥರೆ ಕ್ಷೀರ ಸಮುದ್ರದಿಂದ ಹುಟ್ಟಿದವಳು, ನಂತರ ದೈವಸಂಕಲ್ಪದಂತೆ ಅವಳು ವಿಶೇಷ ಪ್ರಯಾಸ ತಪಸ್ಸನ್ನು (ತನ್ನ ಸ್ವರೂಪಕ್ಕೆ ತಕ್ಕಂತೆ) ಮಾಡಿ ಅಪ್ಸರ ಸ್ತ್ರೀಯಾಗಿ ಹುಟ್ಟಿದಳು. ಮಹಾಲಕ್ಷ್ಮಿಯು ಉದ್ಭವವಾಗುವ ಪೂರ್ವದಲ್ಲೇ ಹುಟ್ಟಿದಳಾದ್ದರಿಂದ **ಜ್ಯೇಷ್ಠ** ನಾಮಕಳಾಗಿ ಕಲಿಯ ಮಡದಿಯಾದಳು. **ಅಧರ್ಮ**ನೆಂಬ ಮಗನಾದನು. (ಭಾ. ಆದಿ ೬೮.) ಒಮ್ಮೆ ಬ್ರಹ್ಮದೇವರನ್ನು ಕುರಿತು ತಪಸ್ಸು ಮಾಡಿದಳು. ಬ್ರಹ್ಮದೇವನನ್ನು **''ತನಗೆ ಯಾವಾಗ ಮುಕ್ತಿ ಆಗುವುದು''** ಎಂದು ಕೇಳಿದಾಗ ಬ್ರಹ್ಮದೇವ ಅವಳ ಅಸುರ ಸ್ವಭಾವಕ್ಕೆ ಯೋಗ್ಯವಾದ ತಮಸ್ಸನ್ನೇ ಹೊಂದುವುದಕ್ಕಾಗಿ ನೀನು ದಶರಥ ಮಹಾರಾಜನ ಪತ್ನಿ ಕೈಕೇಯಿಯ ದಾಸಿಯಾಗಿ ಶ್ರೀರಾಮನ ಪಟ್ಟಾಭಿಷೇಕವನ್ನು ಶೀಘ್ರವಾಗುವಂತೆ ಮಾಡು. ಆಗ ನಿನಗೆ ಯೋಗ್ಯ ಗತಿ ಹೊಂದುವೆ. ಬ್ರಹ್ಮದೇವನು ಜ್ಯೇಷ್ಠಾನಾಮಕ ದುಷ್ಟ ಸ್ತ್ರೀಯ ಅಯೋಗ್ಯವಾದ ತಪಸ್ಸಿನಿಂದ ಬೇಸತ್ತು ಅವಳಿಗೆ ವರವೆಂದೆನಿಸಿದ ಶಾಪವನ್ನೇ ಕೊಟ್ಟರು. ಹೀಗೆ ಹೇಳಲ್ಪಟ್ಟವಳಾಗಿ ಭುವಿಯಲ್ಲಿ ಅಲಕ್ಷ್ಮಿಯೇ ಮಂಥರೆಯಾಗಿ ಕೈಕೇಯಿ ದಾಸಿಯಾದಳು.

**ಪೂರ್ವಂ ಕ್ಷೀರಾಬ್ಧಿಜಾತಾ ಕಥಮಪಿ ತಪಸೈವಾಪ್ಸರಸ್ತ್ವಂಪ್ರಯಾತಾ**
**ತಾಂ ನೇತುಂ ತತ್ತಮೋಽಂಧಂ ಕಮಲಜ ನಿ ರುವಾಚಾಽಶು ರಾಮಾಭಿಷೇಕಮ್।**
**ಭೂತ್ವಾ ದಾಸೀ ವಿಲುಂಪ ಸ್ವಗತಿಮಪಿ ತತಃ ಕರ್ಮಣಾ ಪ್ರಾಪ್ಸ್ಯಸೇ ತ್ವಂ**
**ಸೇತ್ಯುಕ್ತಾ ಮಂಥರಾಽಽಸೀತ್ ತದನು ಕೃತವತ್ಯೇವ ಚೈತತ್ ಕುಕರ್ಮ**

**ಮ.ತಾ.ನಿ. ೫–೨**

**ಒಂದು ವಿಶೇಷಾಂಶ : ''ಕಥಮಪಿ ತಪಸೈವಾಪ್ಸರಸ್ತ್ವಂ''** ಇಂತು



ಜ್ಯೇಷ್ಠಾನಾಮಕಳಾದ ಅಲಕ್ಷ್ಮೀ ಅಪ್ಸರವತ್ವನ್ನು ಹೇಗೆ ಹೊಂದಿದಳು ಎಂಬುದಕ್ಕೆ ಶ್ರೀಮದಾಚಾರ್ಯರು ಹೀಗೆ ತಿಳಿಸುತ್ತಾರೆ. ಅಪ್ಸರೆಯಾದರೂ ತನ್ನ ನೈತಿಕ ಸ್ವರೂಪ ಗುಣಗಳಾದ ದುಷ್ಟಶೀಲಾದಿಗಳನ್ನು ಬಿಡಲೇ ಇಲ್ಲ. ಅಲ್ಲದೇ ಮಂಥರೆಯು ದುಷ್ಟ ಕೃತ್ಯಗಳಿಂದ ಏನಾದರೂ ಪುಣ್ಯ ಮಾಡಿದ್ದರೂ ಅವೆಲ್ಲ ಲೋಪವಾಗಿ ಅವಳಿಗೆ ಅಂಧಃ ತಮಸ್ಸೆ ಆಗುವುದು ಎಂದು ಸೂಚಿಸಲು **''ತದನು ಕೃತವತ್ಯೇವ''** ಎಂದು. ಆದರೆ **''ತದನು ಚ ಕೃತವತ್ಯೇವ''** ಎನ್ನುವುದಾಗಿ ಹೇಳಬೇಕಿತ್ತು. ಈ ವಾಕ್ಯದಲ್ಲಿ (ಚ) ವರ್ಣವು ಉಕ್ತವಾಗಿದೆ. ಏಕೆಂದರೆ ಮಂಥರೆ ತಾನು ಕುತ್ಸಿತ ಕರ್ಮಗಳಿಂದ ಅಪ್ಸರೆಯಾದಾಗ ತಪಸ್ಸಿನ ಫಲವಾಗಿ ಪುಣ್ಯಲೋಕ ಹೊಂದದೇ ತಮಸ್ಸಿಗೆ ಯೋಗ್ಯಳಾದಲೆಂದು ತಿಳಿಸಲು ಶ್ರೀಮದಾಚಾರ್ಯರು **'ಚ'** ಎಂಬ ವರ್ಣವನ್ನು ಲೋಪ ಮಾಡಿರುತ್ತಾರೆ. ಹೀಗೆ ತಿಳಿಸುತ್ತಾ ಶ್ರೀಮದಾಚಾರ್ಯರು ತಾವು ಮಾಡಿದ ಛಂದಸ್ಸಿನ ಸಾಮ್ಯವಿದೆ ಎಂದು ಪ್ರಮಾಣ ವಚನ **''ನವ ಏಕೇನಾಕ್ಷರೇಣ ಛಂದಾಂಸಿ ವಿಯಂತಿ''**ವಿರುವುದಾಗಿ ಎಂದು ತೋರಿಸುತ್ತಾರೆ.

ಮಂಥರೆ ಯಾವ ಕುತ್ಸಿತ ಕರ್ಮ ಮಾಡಿ ತಮೋಯೋಗ್ಯಳಾದಳು ಎಂದರೆ ಆ ವಿಷಯವನ್ನು ತಿಳಿಸುತ್ತಾರೆ.

**ತದ್ವಾಕ್ಯಾತ್ ಕೈಕಯೀ ಸಾ ಪತಿಗವರಬಲಾದಾಜಹಾರೈವ ರಾಜ್ಯಂ**
**ರಾಮಸ್ತದ್ಗೌರವೇಣ ತ್ರಿದಶಮುನಿಕೃತೇಽರಣ್ಯಮೇವಾಽವಿವೇಶ ।**
**ಸೀತಾಯುಕ್ತೋಽನುಜೇನ ಪ್ರತಿದಿನಸುವಿವೃದ್ಧೋರುಭಕ್ತ್ಯಾಸಮೇತಃ**
**ಸಂಸ್ಥಾಪ್ಯಾಶೇಷಜಂತೂನ್ ಸ್ವವಿರಹಜಶುಚಾ ತ್ಯಕ್ತಸರ್ವೇಷಣಾರ್ಥಾನ್**

**ಮ.ತಾ.ನಿ. ೫–೩**

**ವಿವರಣೆ :** ಮಂಥರೆಯ ಬೋಧನೆಯಿಂದ ಶ್ರೀರಾಮನಿಗೆ ವನವಾಸವೂ, ಕೈಕೇಯಿ ಮಗನಾದ ಭರತನಿಗೆ ರಾಜ್ಯಾಭಿಷೇಕವನ್ನು ಮಾಡುವಂತೆ ದಶರಥ ಮಹಾರಾಜನಿಂದ ವರಗಳನ್ನು ಕೇಳುವಂತೆ ಮಾಡಿ, ಶ್ರೀರಾಮಚಂದ್ರನಿಗೆ ಸಿಗಬೇಕಾದ ರಾಜ್ಯವನ್ನು ಅಪಹರಿಸುವಂತೆ ಮಾಡಿದ ದುಷ್ಕೃತಿಯು ಮಂಥರೆಗೆ ಪುಣ್ಯಲೋಕ ಪ್ರಾಪ್ತವಾಗದೇ ತದ್ವಿರುದ್ಧವಾಗಿ ತಮಸ್ಸೇ ಆಯಿತು ಎನ್ನುವುದನ್ನು ಸೂಚಿಸಿದ್ದಾರೆ.

ಕೈಕೇಯಿಯ ವರದ್ವಯಗಳಿಂದ ಜಗತ್ತಿಗೆ ಒಂದು ರೀತಿಯಿಂದ ಪ್ರಯೋಜನವೇ ಆಯಿತು. ಶ್ರೀರಾಮ ಸೀತಾಲಕ್ಷ್ಮಣರ ಸಮೇತ ಅರಣ್ಯವನ್ನು ಸೇರಿದ್ದರಿಂದ ದೇವತೆಗಳಾ ಹಾಗೂ ಮುನಿಗಳ ಕಾರ್ಯ (ಪ್ರಾರ್ಥನೆ) ಸಾಧಿಸುವಂತಾಯಿತು. ಇಂತು ಕೈಕೇಯಿ ತನಗೆ ತಿಳಿಯದೇ (ಜ್ಞಾನವಿಲ್ಲದೇ) ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿದ್ದರ ಪರಿಣಾಮವಾಗಿ ಆಕೆಗೆ ಕೌಸಲ್ಯಾ ಸುಮಿತ್ರಾರಂತೆ ಕೂಡಲೇ ಪುಣ್ಯಲೋಕ ಪ್ರಾಪ್ತವಾಗದೆ ಸ್ವಲ್ಪ ತಡವಾಗಿ ಪುಣ್ಯಲೋಕವನ್ನು ಹೊಂದಿದಳು. ಇಷ್ಟು ವಿಷಯವು ಇಲ್ಲಿ ಸೂಚಿತವಾಗಿರುವುದು.

ಕೈಕೇಯಿ ನಿಜಕ್ಕೂ ರಾಮ ಭಕ್ತಳು. ಮಂಥರೆ ಹಾಗೂ ಆವಿಷ್ಟಿತ ನಿಕೃತಿ ಎಂಬ ರಾಕ್ಷಸಿಯ ಪ್ರಭಾವದಿಂದ ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನ ತಂದಳು. ಇದರ ಪರಿಣಾಮವಾಗಿ ಪುಣ್ಯತಮ ಲೋಕಕ್ಕೆ ಪ್ರತಿಬಂಧಕವಾಯಿತು. ಏಕೆಂದರೆ ಕೈಕೇಯಿ **ಸತ್ಪುತ್ರ**ನಾದ **ಭರತ**ನನ್ನು ಪಡೆದಿರುವುದರಿಂದ ಚಲ ಲೋಕ ಅಂದರೆ ಅವಳಿಗೆ ಕೊನೆಗೆ ಸದ್ಗತಿಯನ್ನೇ ಕೊಟ್ಟನು.

**ಮಾತೃಣಾಂ ಚಾಪಿ ತಲ್ಲೋಕಸ್ತ್ವಯುತಾಬ್ದಾದಿತೋऽಗ್ರತಃ ।**
**ಅನರ್ಹಾಯಾಸ್ತ್ವಯಾऽऽಜ್ಞಪ್ತಾ ಕೈಕೇಯ್ಯಾ ಅಪಿ ಸದ್ಗತಿಃ ।**
**ಸೂತ್ವಾ ತು ಭರತಂ ನೈಷಾ ಗಚ್ಛೇತ ನಿರಯಾನಿತಿ**

**ತಥಾऽಪಿ ಸಾ ಯದಾವೇಶಾಚ್ಚಕಾರ ತ್ವಯ್ಯಶೋಭನಮ್ ।**
**ನಿಕೃತಿರ್ನಾಮ ಸಾ ಕ್ಷಿಪ್ತಾ ಮಯಾ ತಮಸಿ ಶಾಶ್ವತಿ (ಮ.ತಾ.ನಿ. : ೯-೯೪, ೯೫)**

ಕೈಕೇಯಿಗೆ ದಶರಥ ಮಹಾರಾಜ ಯಾವಾಗ ವಚನ ಕೊಟ್ಟಿದ್ದ ? ಇದನ್ನು ಕೈಕೇಯೀದಾಸಿಯಾದ ಮಂಥರೆ ಜ್ಞಾಪಿಸಿ ಆಗ ನೀನೂ ಕೇಳೆಂದು ಹೇಳಿದ್ದನ್ನು ಈಗ ನೆನಪಿಗೆ ತಂದುಕೊಡುತ್ತಾಳೆ. ರಾಮಾಯಣ ಅಯೋಧ್ಯಾಕಾಂಡ ೯ನೇ ಸರ್ಗ ೧೧ರಿಂದ ೨೧ರವರೆಗಿನ ಶ್ಲೋಕಗಳಲ್ಲಿ ವರ್ಣಿತವಾಗಿರುತ್ತದೆ.

**ಕುಬ್ಜಾ ವಚನ ಮಬ್ರವೀತ್**

**"ತವ ದೇವಾಸುರ ಯುದ್ಧೇ ಸಹ ರಾಜರ್ಷಿಭಿಃ ಪತಿಃ ।**
**ಆಗಚ್ಛತ್ತ್ವಾಮುಪಾದಾಯ ದೇವರಾಜಸ್ಯ ಸಹ್ಯಕೃತ್ ॥**
**ದಿಶಮಾಸ್ಥಾಯ ವೈದೇವಿ ದಕ್ಷಿಣಾಂ ದಂಡಾಕಾನ್ ಪ್ರತಿ ।**
**ವೈಜಯಂತಮಿತಿ ಖ್ಯಾತಂ ಪುರಂ ಯತ್ರ ತಿಮಿಧ್ವಜಃ ॥**
**ಸ ಶಂಬರ ಇತಿ ಖ್ಯಾತಃ ಶತಮಾಯೋ ಮಹಾಸುತಃ ।**
**ದದೌ ಶಕ್ರಸ್ಯ ಸಂಗ್ರಾಮಂ ದೇವಸಂಘೈ ಅನಿರ್ಜಿತಃ ॥**
**ತಸ್ಮಿನ್ಮಹತಿ ಸಂಗ್ರಾಮೇ ಪುರುಷಾನ್ಕ್ಷತವಿಕ್ಷತಾನ್ ।**
**ರಾತ್ರೋ ಪ್ರಸುಪ್ತಾನ್ ಘ್ನಂತಿ ಸ್ಮ ತರಸಾऽऽಸಾದ್ಯ ರಾಕ್ಷಸಾಃ ॥**
**ತತ್ರಾಕರೋನ್ಮಹಾದ್ಯುದ್ಧಂರಾಜಾ ದಶರಥಸ್ತದಾ ।**
**ಅಸುರೈಶ್ಚ ಮಹಾಬಾಹುಃ ಶಸ್ತ್ರೈಶ್ಚ ಶಕಲೀಕೃತಃ ॥**
**ಅಪವಾಹ್ಯತ್ವಯಾದೇವಿ ಸಂಗ್ರಾಮಾನ್ನಷ್ಟ ಚೇತನಃ ॥**
**ತತ್ರಾಪಿ ವಿಕ್ಷತಃ ಶಸ್ತ್ರೈಃ ಪತಿಸ್ತೇ ರಕ್ಷಿತಸ್ತ್ವಯಾ ॥**
**ತುಷ್ಟೇನ ತೇನ ದತ್ತೌ ತೇ ದ್ವೌವರೌ ಶುಭದರ್ಶನೇ ॥**
**ಸತ್ವಯೋಕ್ತಃ ಪತಿರ್ದೇವಿ ಯದೇಚ್ಛೇಯಂ ತದಾವಕಾ ॥**
**ಗೃಹ್ಣೀಯಾಮಿತಿ ತತ್ತೇನ ತಥೇತ್ಯುಕ್ತಂ ಮಹಾತ್ಮನಾ ॥**
**ಅನಭಿಘ್ಞ್ಯಹ್ಯಹಂ ದೇವಿ ತ್ವಯೈವ ಕಥಿತಾ ಪುರಾ ।**
**ಕಥೈಷಾ ತವತು ಸ್ನೇಹಾನ್ಮಮನಸಾ ಧಾರ್ಯತೇ ಮಯಾ ॥**
**ರಾಮಾಭಿಷೇಕ ಸಂಭಾರಾನ್ನಿಗೃಹ್ಯ ವಿನಿವರ್ತಯ ।**



**ತೌವಕಾ ಯಾಚ ಭರ್ತಾರಂ ಭರತಸ್ಯಾ ಭಿಷೇಚನಂ ॥**
**ಪ್ರವ್ರಾಜನಂ ರಾಮಸ್ಯ ತ್ವಂ ವರ್ಷಾಣಿ ಚತುರ್ದಶ ॥**
**ಚತುರ್ದಶ ಹಿ ವರ್ಷಾಣಿ ರಾಮೇ ಪ್ರವ್ರಾಜಿತೇವನಮ್ ।**
**ಪ್ರಜಾಭಾವಗತಸ್ನೇಹಃ ಸ್ಥಿರಃ ಪುತ್ರೋ ಭವಿಷ್ಯತಿ ॥**

**ವಿವರಣೆ :** ಹಿಂದೊಮ್ಮೆ ದೇವದಾನವರ ಯುದ್ಧವಾಯಿತು. ಆಗ ದಶರಥನು ದೇವತೆಗಳ ಸಹಾಯ ಮಾಡಲು ಹೊರಟಿದ್ದ. ಕೈಕೇಯೀ ಬಾಲ್ಯದಿಂದಲೇ ಅಶ್ವಗಳ ಸವಾರಿಯಲ್ಲಿ ನೈಪುಣ್ಯತೆ ಹೊಂದಿದ್ದಳಾದ್ದರಿಂದ ರಾಜನು ಆಕೆಯನ್ನು ತನ್ನ ಸಂಗಡ ಕರೆದುಕೊಂಡು ಹೋಗಿದ್ದ. ರಥಸಾರಥಿಯಾಗಿದ್ದಳು. ಆಗ ಅವನೊಂದಿಗೆ ವೈಜಯಂತಿಪುರದ ರಾಜನಾಗಿದ್ದ ತಿಮಿಧ್ವಜ (ಶಂಬರಾಸುರನೆಂಬ ನಾಮಾಂತರವೂ ಇದ್ದಿತು.) ವೈಜಯಂತಿ ಪಟ್ಟಣ ದಂಡಕಾರಣ್ಯದಲ್ಲಿದ್ದಿತು. ತಿಮಿಧ್ವಜನೊಂದಿಗೆ ದಶರಥ ಮಹಾರಾಜ ಯುದ್ಧ ಮಾಡಿದ. ರಣದಲ್ಲಿ ದಶರಥ ಮಹಾರಾಜನ ಪರಾಕ್ರಮಕ್ಕೆ ಹೆದರಿ ರಾಕ್ಷಸರು ದಿಕ್ಕಾಪಾಲಾಗಿ ಓಡಿಹೋದರು. ಇದನ್ನು ಕಂಡ ರಾಕ್ಷಸಾಧಿಪನಾದ ತಿಮಿಧ್ವಜ ದಶರಥನ ಮೇಲೆ ಬಾಣಗಳ ಮಳೆ ಸುರಿಸಿದ. ಆಗ ಒಂದು ಬಾಣವು ದಶರಥನ ಮೇಲೆ ಎರಗಿ ಮೂರ್ಛಾಕ್ರಾಂತನಾಗಿ ಮರಣಪ್ರಾಯವಾಗುವಂತಾದಾಗ ರಾಜನನ್ನು ರಕ್ಷಿಸಲು ಕೈಕೇಯಿ ತನ್ನ ಚತುರತೆ ಚಮತ್ಕಾರದಿಂದ ರಥವನ್ನು ಬೇರೊಂದು ಕಡೆಗೆ ಕೊಂಡೊಯ್ದಳು. ದಶರಥನು ಅವಳ ಪ್ರಜ್ಞೆ ಉಪಚಾರಗಳಿಂದ ಸುಖವಾಗಿ ಎಂದಿನಂತೆ ಆದ. ಕೈಕೇಯಿಯ ಸಮಯ ಪ್ರಜ್ಞೆಯಿಂದ ವಿಷಯವೆಲ್ಲಾ ತಿಳಿದುಕೊಂಡ. ತನ್ನನ್ನು ಆಪತ್ತಿನಿಂದ ರಕ್ಷಿಸಿದ ಮಡದಿಯಲ್ಲಿ ಸಂತೋಷ ಭರಿತನಾಗಿ **"ಕೈಕೇಯಿ ಸಂತೋಷವಾಗದೆ ನನ್ನನ್ನು ಆಪತ್ತಿನಿಂದ ಕಾಪಾಡಿರುವೆ. ನಾನು ನಿನಗೆ ಎರಡು ವರಗಳನ್ನು ಕೊಡಲಿಚ್ಛಿಸುತ್ತೇನೆ. ನಿನಗೆ ಬೇಕಾದ್ದನ್ನು ಕೇಳಿ"** ಎಂದ. ಆಗ ಕೈಕೇಯಿ ಮಹಾರಾಜಾ ವರಗಳು ಈಗ ಸದ್ಯ ಬೇಡ. ನಾನು ಮುಂದೆ ಸಮಯ ಬಂದಾಗ ಕೇಳುತ್ತೇನೆ ಅಂತ ಹೇಳಿದಳು. ಈ ವಿಷಯವನ್ನೂ ಮಂಥರೆ ಜ್ಞಾಪಿಸಿ ರಾಣಿ ಆ ಸಮಯ ಈಗ ಬಂದಿದೆ. ರಾಮಚಂದ್ರನನ್ನು ರಾಜ್ಯಕ್ಕೆ ಯುವರಾಜನನ್ನಾಗಿ ಮಾಡುವ ಸಂದರ್ಭ ಬಂದಿದೆ. ನನ್ನ ಮಾತನ್ನು ಕೇಳು. ನೀನು ಆ ಎರಡು ವರಗಳನ್ನು ಬೇಡು.

ರಾಮನು ೧೪ ವರ್ಷಗಳು ಅರಣ್ಯದಲ್ಲಿ ತಿರುಗುತ್ತಾ ಇರುವಾಗ ಅಯೋಧ್ಯಾ ಪ್ರಜೆಗಳು ರಾಮನ ಬಗ್ಗೆ ಮರೆತುಬಿಡುತ್ತಾರೆ. ಆಗ್ಗೆ ಭರತನೇ ಶಾಶ್ವತವಾಗಿ ರಾಜ್ಯವಾಡುತ್ತಾನೆ. ನೀನು ಮಹಾರಾಣಿಯಾಗಿ ವಿಜೃಂಭಿಸುವಿ ಎಂದು ಕೈಕೇಯಿ ಮನಸ್ಸನ್ನು ಕೆಡಿಸಿ ದುರ್ಬೋಧನೆ ಮಾಡಿದಳು ಮಂಥರೆ.

**ವಿಷಯ : ರಾಮನನ್ನು ೧೪ ವರ್ಷಗಳ ಕಾಲ ವನಗಳಲ್ಲಿ ತಿರುಗಲು ಏಕೆ ಕೇಳಿದಳು ?** ಒಬ್ಬ ಪುರುಷ ೧೨ ವರ್ಷ ತನ್ನ ಸಂಬಂಧಗಳೊಂದಿಗೆ ಮರೆಯಾಗಿ ಕಾಣದೇ ಇದ್ದಾಗ ಸಂಬಂಧವು ಕಡಿದು ಹೋಗುವುದು. One generation ಆಗಿರುವುದು.

ಆಗ್ಗೆ ಯಾರೂ ಸ್ಮರಿಸುವುದಿಲ್ಲ. ೧೨ ವರ್ಷಗಳಾದ ಮೇಲೆ ಯಾರಿಗೆ ಯಾರೂ ತಿಳಿಯುವಂತಿಲ್ಲ. ಮಹಾಭಾರತ ವನ ಪರ್ವದಲ್ಲಿ ಪಾಂಡವರು ಮಾಯಾಜೂಜಿನಲ್ಲಿ ಕೌರವರೊಂದಿಗೆ ಸೋತು ೧೨ ವರ್ಷ ವನವಾಸ, ೧ ವರ್ಷ ಅಜ್ಞಾತವಾಸ ತೆರಳುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.

ಅಂತೆಯೇ ಮಂಥರೆ ಬೋಧನೆ ಪ್ರಕಾರ ಕೈಕೇಯಿ ಶ್ರೀರಾಮಚಂದ್ರನು ವನವಾಸವಾಗುವಂತೆ ಕಾರಣಳಾದಳು.

ಇದರ ಪರಿಣಾಮ ತನ್ನ ಗಂಡ ಸಾಯುವನು. ತಾನು ವಿಧವೆಯಾಗುವಳು ಎಂಬ ವಿಚಾರ ಮಾಡಲಿಲ್ಲ. ಗಂಡನನ್ನು ಬಲಿ ತೆಗೆದ ಹೆಣ್ಣು.. ಮಹಾಪಾತಕಿ.. ತನ್ನ ಹಿಂದಿನ ಜನ್ಮದ ಕಲಹಾ ಈಗ ಎದ್ದು ಗಂಡ ಸತ್ತರೂ ಚಿಂತೆಯಿಲ್ಲ. ತಾನು ರಾಜಮಾತೆಯಾಗುವ ದುಷ್ಟ ಕನಸು ಕಂಡಳು.

ಹೀಗಿದ್ದರೂ ಕೈಕೇಯಿ ಶ್ರೀರಾಮನಲ್ಲಿ ಒಂದು ದುರ್ನಡತೆ ಕಂಡಿಲ್ಲ. ಏಕೆಂದರೆ ಶ್ರೀರಾಮ ವನವಾಸಕ್ಕಾಗಿ ಹೊರಟ. ದಶರಥರಾಜನು ರಾಮನನ್ನೇ ಜಪಿಸುತ್ತಾ ಮರಣಿಸಿದ. ನಂತರ ಭರತ ಶತೃಘ್ನರು ಬರುತ್ತಾರೆ. ಭರತ ಬಂದ ನಂತರ ಅರಮನೆಯಲ್ಲಿ ಮೌನವಿರುವುದಕ್ಕೆ ಕಾರಣ ತಿಳಿದು, ತನ್ನ ತಾಯಿ ಇಂತಹ ಘೋರ ಕೃತ್ಯ ಮಾಡಿದ್ದನ್ನು ಕೇಳಿ ಮಾತೆಯನ್ನು ಕೇಳುತ್ತಾನೆ. **ನಮ್ಮ ತಂದೆ ಮಹಾರಾಜ ಮರಣಿಸುವ ಮುನ್ನ ಏನು ಹೇಳಿದ ?**

**ಕೈಕೇಯಿ:** ನಿನ್ನ ತಂದೆ ಕೊನೆ ಗಳಿಗೆಯಲ್ಲಿ **ರಾಮ ರಾಮ ಹಾ ಸೀತಾ ಹೇ ಲಕ್ಷ್ಮಣ** ಎಂದು ಕೂಗಿದರು. **ನನ್ನ ರಾಮಚಂದ್ರ ವನವಾಸದಿಂದ ಹಿಂತಿರುಗಿ ಬಂದುದನ್ನು ಯಾರು ನೋಡುತ್ತಾರೋ ಅವರೇ ಧನ್ಯರು.**

**ಸಿದ್ಧಾರ್ಥಸ್ತೆ ನರಾ ರಾಮಮಾಗತಂ ಸೀತಾಯಾ ಸಹ ।**
**ಲಕ್ಷ್ಮಣಂ ಚ ಮಹಾಬಾಹುಂ ದ್ರಕ್ಷ್ಯಂತಿ ಪುನರಾಗತಮ್ (ಅ.ಕಾ. ೨೮)**

ಅವರನ್ನೇ ಸ್ಮರಿಸುತ್ತಾ ನಿನ್ನ ತಂದೆ ಪರಲೋಕಕ್ಕೆ ಹೋದರು ಎಂದಳು.

ಆಗ ಭರತ ಕೇಳುತ್ತಾನೆ – ಹಾಗಾದರೆ ಅರಣ್ಯಕ್ಕೆ ಹೋಗಬೇಕಾದರೆ ಯಾವ ಅಪರಾಧ ಮಾಡಿದ ? ಬ್ರಾಹ್ಮಣರನ್ನು ವಂಚಿಸಿದನೇ ಅಥವಾ ಸಂಪತ್ತನ್ನು ಅಪಹರಿಸಿದನೇ? ದೀನರರನ್ನು ವಂಚಿಸಿದನೇ ? ಪರಸ್ತ್ರೀಯರನ್ನು ಕೆಟ್ಟ ಕಣ್ಣಿಂದ ಎಂದೂ ನೋಡಿದವನಲ್ಲ. ಹಾಗೇನಾದರೂ ಈಗ ಮಾಡಿದನೇ ? ಅಪರಾಧಿಯಂತೆ ತಲೆ ತಗ್ಗಿಸಿಕೊಂಡು ಅರಣ್ಯಕ್ಕೆ ಏಕೆ ಹೋದ ?

ಕೈಕೇಯಿ ಹೇಳುತ್ತಾಳೆ. ಛೇ ಶ್ರೀರಾಮ ಅಂತಹ ಅಪರಾಧ ವರ್ತನೆ ಮಾಡಿಲ್ಲ ಎಂದೂ ಮಾಡಿಲ್ಲ. ಪರಸ್ತ್ರೀಯರನ್ನೂ ಎಂದಿಗೂ ಕಾಮಿಸುವವನಲ್ಲ.



**ನರಾಮಃ ಪರದಾರಾಂಶ್ಚ ಚಕ್ಷುರ್ಭ್ಯಾಮಪಿಪಶ್ಯತಿ** ಎಂದು ಹೇಳಿ ಕೈಕೇಯಿ ಶ್ರೀರಾಮನಿಗೆ **ಬಹುಮಾನ ಪತ್ರ, ಯೋಗ್ಯತಾ ಪತ್ರ** Certificate ಕೊಟ್ಟಿದ್ದು ಇದೊಂದೇ (ಮಾನಪತ್ರ).

ರಾಮಚಂದ್ರ, ನೀನು ಕೂಡಲೇ ಅರಣ್ಯಕ್ಕೆ ಹೋಗು. ಭರತನನ್ನು ಕರೆಸಬೇಕು. ಸದ್ಯ ತೆರಳು ಎಂದಾಗ ಶ್ರೀರಾಮಚಂದ್ರನಲ್ಲಿ ಯಾವ ರೀತಿಯ ಪ್ರತಿಕ್ರಿಯೆ ತೋರಿಸಲಿಲ್ಲ. ಗುಣಸಾಗರನಾದ ರಾಮಚಂದ್ರ ತಾಳ್ಮೆ ಕಳೆದುಕೊಳ್ಳಲಿಲ್ಲ. ಮಂದಾಹಾಸದಿಂದ ಕೈಕೇಯಿ ಮಾತುಗಳನ್ನು ಕೇಳಿ ಮೃದುವಾಗಿ ಹೇಳುತ್ತಾನೆ. ತಾಯಿ ಕೈಕೇಯಿ, ನಿನ್ನ ವಚನವನ್ನು ಕೇಳಿ ನನಗೆ ತುಂಬಾ ಆನಂದವಾಗುವುದು. ಮಹಾರಾಜನಲ್ಲಿ ಕೇಳಿದ ಎರಡು ವರಗಳು ಈಗ ನನಗೆ ವರವೇ ಆಗಿದೆ. ನೀನು ನನ್ನನ್ನು ಎಷ್ಟು ಪ್ರೀತಿಸುತ್ತೀಯಾ ಎಂಬುದು ಖಚಿತವಾಯಿತು. ನಾನು ಕಾಡಿಗೆ ನಡೆಯುತ್ತೇನೆ. ನಿನ್ನ ವಚನವನ್ನು ಪಾಲಿಸುತ್ತೇನೆ. ಬೇಸರವಿಲ್ಲ. ಆದರೆ ನನ್ನ ತಂದೆ ತನ್ನ ನಿರ್ಧಾರವನ್ನು ನನಗೆ ನೇರವಾಗಿ ತಿಳಿಸಿದ್ದರೆ ನನಗೆಷ್ಟು ಹರ್ಷವಾಗುತ್ತಿತ್ತು. ಆಜ್ಞೆಯನ್ನು ನಿನ್ನ ಮೂಲಕ ತಿಳಿಸಿದ್ದು ಸ್ವಲ್ಪ ಅಸಮಾಧಾನವಾಗಿದೆ. ತಾಯಿ, ಚಿಂತೆ ಬೇಡ. ತಂದೆಯ ಆಜ್ಞೆಯನ್ನು ಶಿರಸಾ ವಹಿಸುತ್ತೇನೆ. ಕಾಡಿಗೆ ಹೊರಡಲು ಸಿದ್ಧನಿದ್ದೇನೆ. ಚಾರರ ಮೂಲಕ ಭರತನನ್ನು ಕರೆಸು. ನಾನೇ ಸಾಕ್ಷಾತ್ತಾಗಿ ನಿಂತು ಭರತನ ಪಟ್ಟಾಭಿಷೇಕವನ್ನು ನಡೆಸುವ ಭಾಗ್ಯ ಒದಗಿಸು. ನಂತರ ನನ್ನ ಅರಣ್ಯದ ಮನವಾಗುವುದು.

ಕೈಕೇಯಿ ಈ ರಾಮನ ಮಹಾವ್ಯಕ್ತಿತ್ವವನ್ನು ಗಮನಿಸಲಿಲ್ಲ. ರಾಮನಿದ್ದರೆ ಭರತನ ಅಭಿಷೇಕವಾಗುವುದು ದುಸ್ಸಾಧ್ಯವೆಂದು ಭಾವಿಸಿ ರಾಮ, **"ನೀನು ಭರತನ ಆಗಮನಕ್ಕಾಗಿ ಕಾಯುವುದು ಬೇಡ. ನೀನು ತಕ್ಷಣ ಹೊರಟು ಹೋಗು"** ಎಂದಳು. ನಿನ್ನ ತಂದೆ "ರಾಮಚಂದ್ರ ಕಾಡಿಗೆ ಹೋಗುವವರೆಗೂ ಸ್ನಾನ ಊಟ ಮಾಡುವುದಿಲ್ಲ" ಎಂದೂ ಪ್ರತಿಜ್ಞೆ ಮಾಡಿದ್ದಾನೆ. ಆದ್ದರಿಂದ ನಿನ್ನ ತಂದೆಗೆ ಸಂತೋಷವಾಗಬೇಕಿದ್ದರೆ, ತಡಮಾಡದೆ, ಅಯೋಧ್ಯೆಯಿಂದ ಹೊರಡು.

ಈ ಒಂದು ಸಂದರ್ಭದಲ್ಲಿ ಶ್ರೀರಾಮನ ಉದಾತ್ತ ವ್ಯಕ್ತಿತ್ವವನ್ನು ಅತಿ ಸುಂದರವಾಗಿ ಚಂಪೂ ರಾಮಾಯಣದಲ್ಲಿ ಭೋಜಕವಿ ವರ್ಣಿಸುತ್ತಾನೆ.

**"ವನುಭುವಿತನುಮಾತ್ರ ತ್ರಾಣಮಾಜ್ಞಾಪಿತಂ ಮೇ**
**ಸಕಲಭುವನಭಾರಃ ಸ್ಥಾಪಿತೋ ವತ್ಸಮೂರ್ಧ್ನಿ ।**
**ತದಹಸುಕರತೆಯಾಮಾವಯೋಸ್ತರ್ಕಿತಾಯಾಂ**
**ಮಯಿ ಪತತಿ ಗರೀಯಾ ನಂಬ ತೇ ಪಕ್ಷಪಾತಃ ॥"**

ಮಾತೆ ಕೈಕೇಯಿ ಈ ರಾಜ್ಯಕ್ಕೆ ಅರಸನಾಗುವುದು ಸುಪ್ಪತ್ತಿಗೆಯ ಹಾಸಿಗೆಯಲ್ಲ. ಮುಳ್ಳಿನ ಮೇಲೆ ಕುಳಿತಂತೆ ಆಗುವುದು. ಇಂತಹ ಕಷ್ಟ **ರಾಮ ನಿನಗೇಕೆ** ಎಂದು

ಎಷ್ಟು ಪ್ರೀತಿಯಿಂದ ಹೇಳಿದೆ. ಅದಕ್ಕಾಗಿ ನನ್ನನ್ನು ಕಾಡಿಗೆ ಕಳಿಸುತ್ತೀಯಾ. ಅಲ್ಲಿ ನನ್ನನ್ನು ನಾನೇ ನೋಡಿಕೊಳ್ಳುತ್ತೇನೆ. ಚಿಂತೆಯಿಲ್ಲ.

ಆದರೆ ತಾಯಿ, ಇಷ್ಟು ಬೃಹತ್ತಾದ ಜವಾಬ್ದಾರಿಯನ್ನು ಮೃದು ಕೋಮಲ ಭುಜಗಳಿರುವ ಭರತನಿಗೆ ಕೊಟ್ಟಿರುವೆ. ನನ್ನ ಹೆತ್ತ ತಾಯಿಗಿಂತಲೂ ವಿಶಿಷ್ಟ ಪ್ರೀತಿ ತೋರಿಸುತ್ತೀಯ. ನಾನೇ ಧನ್ಯ... ಎಂದು.

ಕೊನೆಗೆ ಶ್ರೀರಾಮ ತೆರಳುವ ಮುಂಚೆ ಒಂದು ಮಾತನ್ನು ಹೇಳುತ್ತಾನೆ.

ತಾಯಿ ಕೈಕೇಯಿ. ರಾಜ್ಯ ತ್ಯಾಗ ಮಾಡುವುದನ್ನು ಮನಸ ಅಂಗೀಕರಿಸುತ್ತಾನೆ. ಕಾಡಿಗೆ ಹೊರಡುವುದು ನನಗೆ ಕಷ್ಟ ದುಃಖವೆಂದು ಭಾವಿಸುವುದಿಲ್ಲ. ಹದಿನಾಲ್ಕು ವರ್ಷ ನಿಶ್ಚಿಂತನಾಗಿ ಕಳೆಯುತ್ತೇನೆ. ಆದರೆ ನನ್ನ ಬಗ್ಗೆ ಈಗ ನಿನಗೆ ನಂಬಿಕೆ ಇಲ್ಲವಾಯ್ತಲ್ಲಾ. ಈ ರಹಸ್ಯವನ್ನು ನಿನ್ನ ಹೃದಯದಲ್ಲಿ ಗುಪ್ತವಾಗಿಟ್ಟುಕೊಂಡು ಈಗ ಹಿಂದೆ ತಂದೆ ದಶರಥನಿಂದ ಎರಡು ವರ ಬೇಡಿ ಹಿಂದಿನ ವರದ್ವಯವನ್ನು ನೆನೆಪಿಗೆ ತಂದು ದಶರಥನನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿ ನಿಮ್ಮ ಅಭಿಪ್ರಾಯ ಆಶೆಯನ್ನು ಅವನ ಹೆಗಲಿನ ಮೇಲೆ ಹೊರೆಸಲು ರಾಜನನ್ನು ಅವಾಕ್‌ನನ್ನಾಗಿ ಮಾಡಿ ಮಹಾರಾಜನ ಆಜ್ಞೆ ಎಂದು ಹಾಸ್ಯ ಮಾಡಿರುವಿ. ತಾಯಿ ಹೇಳು, ನೀನೇ ಕರೆದು ರಾಮಚಂದ್ರ, ನೀನು ಕಾಡಿಗೆ ಹೋಗು. ನನ್ನ ಮಗ ಭರತನೇ ಮಹಾರಾಜನಾಗಲಿ ಎಂದು ಹೇಳಿದ್ದರೆ ಮರು ಮಾತನಾಡದೇ ಹೊರಡುತ್ತಿದ್ದೆ. ನಿನ್ನ ಅಪೇಕ್ಷೆಯನ್ನು bypass ಮಾಡಿ ರಾಜನ ಮಾತು ಅಂತ ಹೇಳುವ ಅಗತ್ಯವಿದ್ದಿಲ್ಲವಲ್ಲ ಅಂದಾಗ ನಿನಗೆ ನನ್ನ ಮೇಲಿನ ಗುಣ ಎಂಥದು ಅಂತ ಕಾಣಲಿಲ್ಲವೇಕೆ ? ಅಷ್ಟೊಂದು ಅಪನಂಬಿಕೆಯೇ. ಅದಕ್ಕಾಗಿ ಸ್ವಲ್ಪ ದುಃಖವಾಗುತ್ತದೆ.

**ಅನುಕ್ತೋಽಪ್ಯತ್ರ ಭವತಾ ಭವತ್ಯಾವಚನಂಡಹಮ್ ।**
**ವನೇ ವತ್ಸ್ಯಾಮಿ ವಿಜನೇ ವರ್ಷಾಣಿಹ ಚತುರ್ದಶ ॥**
**ನವನಂ ಮಯಿ ಕೈಕೇಯೀ ಕಿಂಚಿದಾಶಂಸಸೆ ಗುರುಮ್ ।**
**ಯದ್ರಾಜಾನಮವೋಚಸ್ತ್ವಂಮಮೇಶ್ವರತರಾ ಸತಿ ॥ (ಅಯೋ ೨.೧೯.೨೪)**

ಇಷ್ಟು ಹೇಳಿ ಶ್ರೀರಾಮನು ಕಾಡಿಗೆ ಹೊರಡುತ್ತಾನೆ. ಶ್ರೀರಾಮನಿಗೆ ಯಾವುದೆ ಮನೋವೈಕಲ್ಯ ಚಿತ್ತ ವಿಕ್ರಿಯ ಕಾಣಲಿಲ್ಲ.

**ನವನಂ ಗಂತುಕಾಮಸ್ಯತ್ಯಜತಶ್ಚ ವಸುಂಧರಾಮಾ ।**
**ಸರ್ವಲೋಕಾತಿಗಸ್ಯೇವ ಲಕ್ಷ್ಯತೇ ಚಿತ್ತವಿಕ್ರಿಯಾ ॥ (ಅಯೋ ೨.೧೯.೩೩)**

ಇಂತಹ ನಿಸ್ವಾರ್ಥ ಮನೋಭಾವ ಶ್ರೀರಾಮನನ್ನು ಬಿಟ್ಟರೆ ಬೇರೆ ಯಾರಲ್ಲಿಯೂ ಕಾಣುವುದಿಲ್ಲ.



ಹೀಗೆ ಶ್ರೀರಾಮನನ್ನು ಸತೀ ಸಹಜನೊಂದಿಗೆ ಅರಣ್ಯಕ್ಕೆ ಹೋಗುವಂತೆ ಮಾಡಿದ ಮಹಾ ಪಾತಕಿಗೆ ಘೋರ ನರಕವೇ ಆಗಬೇಕಿತ್ತು. ಕೌಸಲ್ಯಾ ಸುಮಿತ್ರೆಯರು ದಶರಥನ ಮರಣಾ ನಂತರ ಸಹ ಗಮನ ಮಾಡಲಿಲ್ಲ. ರಾಮಲಕ್ಷ್ಮಣರ ವಿರಹದಿಂದ ಪರಿತಪಿಸುತ್ತಿದ್ದರು. ಶ್ರೀರಾಮನ ಆಗಮನವನ್ನು ಎದುರು ನೋಡುತ್ತಿದ್ದರು. ಆದರೆ ಕೈಕೇಯಿ ತಾನು ಪಟ್ಟದ ರಾಜಮಾತೆ ಆಗುವ ಕನಸನ್ನು ಕಾಣುತ್ತಿದ್ದಳು. ಆದರೆ ಭರತನು ಬಂದು ಅರಮನೆಯಲ್ಲಿ ನಡೆದ ವೃತ್ತಾಂತ ತಿಳಿದು ತನ್ನ ತಾಯಿಯನ್ನು ನಿಂದಿಸುತ್ತಾನೆ. ಕೈಕೇಯಿ ಕನಸು ಉರುಳಿಬಿದ್ದಿತು. ಪಾತಕಿ ಪತಿಪ್ರಾಣ ತೆಗೆದವಳು ಭ್ರಷ್ಟಳು. ಇತ್ಯಾದಿಯಾಗಿ ಭರತ ಹೇಳಿ ತಾನು ಅಯೋಧ್ಯಾಧಿಪತಿ ಆಗುವುದಿಲ್ಲ. ಶ್ರೀರಾಮನೇ ರಾಜ ಅಂತ ಕೈಕೇಯಿಯನ್ನು ಬಹಳವಾಗಿ ನಿಂದಿಸುತ್ತಾನೆ. ಕೈಕೇಯಿಗೆ ತನ್ನ ತಪ್ಪಿನ ಅರಿವಾಯಿತು. ಭರತನೊಂದಿಗೆ ರಾಮನಲ್ಲಿದ್ದ ಅರಣ್ಯಕ್ಕೆ ಹೋಗುತ್ತಾಳೆ. ಪಶ್ಚಾತ್ತಾಪದಿಂದ ನೊಂದಿರುತ್ತಾಳೆ. ಆದರೆ ಮಂಥರೆ ಎಂಬ ರಾಕ್ಷಸಿಗೆ ಅಂಧತವಸ್ಥ ಆಯಿತು. ಪಶ್ಚಾತ್ತಾಪಳಾದ ಕೈಕೇಯಿಗೆ ನರಕವಾಗಲಿಲ್ಲವಾದರೂ ಸ್ವರ್ಗವು ತಡವಾಗಿ ದೊರೆಯಿತು. ಕೌಸಲ್ಯಾ ಸುಮಿತ್ರರಿಗೆ ಸ್ವರ್ಗದಲ್ಲಿ ತಮ್ಮ ಪತಿಯೊಂದಿಗೆ ಸೇರಿ ಸುಖಿಸಿದರು.

ಕೈಕೇಯಿಗೆ ನರಕವೇಕಾಗಲಿಲ್ಲವೆಂದರೆ ಶ್ರೀಮದಾಚಾರ್ಯರು ಮ.ಭಾ.ತಾ.ನಿ. ಅ-೯.೯೨ರಲ್ಲಿ ತಿಳಿಸುತ್ತಾರೆ.

ಬ್ರಹ್ಮದೇವರು ಶ್ರೀಹರಿ ಅವತಾರನಾದ ಶ್ರೀರಾಮನನ್ನು ಸ್ತೋತ್ರ ಮಾಡುತ್ತಾ ಹೀಗೆ ಹೇಳಿದರು. ಶ್ರೀರಾಮಚಂದ್ರಪ್ರಭೋ ನಿನ್ನ ಆಜ್ಞಾ ಪ್ರಕಾರ ದಶರಥ ರಾಜನಾದ ನಿನ್ನ ತಂದೆಗೆ ಉತ್ಕೃಷ್ಟ ಸ್ಥಾನ ಕೊಡಲಾಗಿದೆ.

**ತ್ವದಾಜ್ಞಯಾ ಮಯಾ ದತ್ತಂ ಸ್ಥಾನಂ ದಶರಥಸ್ಯ ಹಿ**

ದಶರಥ ರಾಜನ ನಿರ್ಯಾಣ ನಂತರ ೧೦,೦೦೦ ವರ್ಷಗಳಾದ ಮೇಲೆ ಕೌಸಲ್ಯಾ ಸುಮಿತ್ರಾ ದೇವಿಯರಿಗೆ ದಶರಥನ ಲೋಕವನ್ನು ಹೊಂದಿದರು. ಕೈಕೇಯಿಗೆ ನರಕವೇ ಆಗಬೇಕಿತ್ತು. ನಿನ್ನ ಆಜ್ಞಾನುಸಾರ ಎರಡು ಕಾರಣಗಳಿಂದಾಗಿ ಅವಳಿಗೆ ಸದ್ಗತಿ ಆಯಿತು. ಅವಳಲ್ಲಿ ಆವಿಷ್ಟವಾಗಿದ್ದ ನಿಕೃತೀ ಎಂಬ ರಾಕ್ಷಸಿಗೆ ನಿತ್ಯ ಅಂಧಃ ತಮಸ್ಸೇ ಆಯಿತು.

ಕೈಕೇಯಿ ನಿಕೃತಿಯ ಪ್ರಭಾವ ಸ್ವಭಾವದಿಂದ ನಿನ್ನ ರಾಜ್ಯಾಭಿಷೇಕಕ್ಕೆ ವಿಘ್ನ ತಂದಳು. ಕೈಕೇಯಿ ಎರಡು ವರಗಳನ್ನು ಬೇಡಿದ್ದರ ಫಲವಾಗಿ ಲೋಕಕ್ಕೆ ಉಪಕಾರವೇ ಆಯಿತು. ದುಷ್ಟ ದೈತ್ಯ ರಾಕ್ಷಸರ ಸಂಹಾರ, ಬ್ರಹ್ಮನ ವರಬಲದಿಂದ ಮದೋನ್ಮತ್ತರಾದ ರಾವಣ ಕುಂಭಕರ್ಣಾದಿ ದೈತ್ಯರ ಸಂಹಾರ ಸಹ ಜನಹಿತ ರಕ್ಷಣೆ ಕಾರ್ಯವಾಗಲು ಸಹಕಾರಿಯಾಯಿತು. ಇನ್ನು ಕೈಕೇಯಿ ಭರತನಂತಹ ಭಾಗವತೋತ್ತಮ ಶ್ರೀರಾಮಭಕ್ತನ ತಾಯಿಯಾದ ಕಾರಣದಿಂದಾಗಿ ಕೈಕೇಯಿಗೆ ನರಕವಾಗಲಿಲ್ಲ. ಪ್ರಸ್ತುತ ಸದ್ಗತಿಯೇ

ಆಯಿತು. ಹೇಗೆಂದರೆ ಮಾಯಾವಾದಿಗಳು ವೇದ, ಉಪನಿಷತ್ತುಗಳಲ್ಲಿ ಕೆಲ ಬ್ರಹ್ಮೈಕ್ಯ ವಾಕ್ಯಗಳನ್ನು ತಿಳಿಸಿದರೂ ಅದರಿಂದಾಗಿ ನಿಜ ಸ್ವಭಾವವುಳ್ಳ ವೈಷ್ಣವರ ಮನಸ್ಸು ವ್ಯತ್ಯಾಸವಾಗದೇ; ತತ್ವವನ್ನೇ ಅಂಗೀಕರಿಸುವರೋ ಅಂತೆಯೇ ಕೈಕೇಯಿ ರಾಕ್ಷಸಿಯ ದುರ್ಬೋಧನೆಯಿಂದ ತಾತ್ಕಾಲಿಕವಾಗಿ ಮನೋವ್ಯಸ್ತವಾಗಿ ಶ್ರೀರಾಮನ ವನವಾಸಕ್ಕೆ ಕಾರಣವಾದಾಗ್ಯೂ ಪ್ರಸ್ತುತ ಕೈಕೇಯಿ ಶ್ರೀರಾಮನ ಆಂತರಿಕ ಭಕ್ತಳೆಂಬುದು ಸೂಚಿತವಾಗುವುದು.

ಶ್ರೀಮಹಾವಿಷ್ಣು ಲೋಕಮೋಹನಾರ್ಥವಾಗಿ ಜಗತ್ತನ್ನು ೨ ಭಾಗ ಮಾಡಿದನು. ಒಂದನೆಯದು ಬ್ರಾಹ್ಮಣರು, ವೇದಗಳು ಮತ್ತು ಲಕ್ಷ್ಮೀದೇವಿ. ಎರಡನೆಯ ಭಾಗ ವೇದ ಬಾಹಿರರು ಮತ್ತು ಅಧರ್ಮ ರೂಪಳಾದ ಅಲಕ್ಷ್ಮೀ.

ಸಂಗ್ರಹ / ವಿವರಣೆ

**ಪ್ರೊ।। ಪಂ।। ಬದರೀನಾಥಾಚಾರ್ಯ ಘೂಳಿ** ಎಂ.ಎ.

**೨೦–೦೮–೨೦೦೮**